ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ. ನ್ಯಾಯಾಲಯ ಅಂಕೋಲಾ
ಸಿಸಿ ನಂಬರ. 292/2020

ಸಿ ಡಬ್ಲ್ಯೂ-8
ಪಿ ಡಬ್ಲ್ಯೂ-8

ದಿಃ 24-01-2025 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋದಿಸಲಾಯಿತು.

| | |
|---|---|
| ಸಾಕ್ಷಿಯ ಹೆಸರುಃ | ದಯಾನಂದ ನಾಯ್ಕ |
| ತಂದೆಯ ಹೆಸರುಃ | ಗೋವಿಂದ ನಾಯ್ಕ |
| ವಯಸ್ಸುಃ | 59 ವರ್ಷ |
| ಉದ್ಯೋಗಃ | ಕೆ ಎಸ್ ಆರ್ ಟಿ ಸಿ ಮೆಕ್ಯಾನಿಕ್ |
| ವಿಳಾಸಃ | ಬೆಲೇಕೇರಿ, ಅಂಕೋಲಾ |

ಮುಖ್ಯ ವಿಚಾರಣೆಃ ಮಾನ್ಯ ಎ ಪಿ ಪಿ ರವರಿಂದಃ

ನಾನು 2004 ರಿಂದ ಅಂಕೋಲಾ ಘಟಕದಲ್ಲಿ ಕೆ ಎಸ್ ಆರ್ ಟಿ ಸಿ ಮೆಕ್ಯಾನಿಕ್ ಕೆಲಸ ಮಾಡುತ್ತಿದ್ದೇನೆ. 2018 ನೇ ಸಾಲಿನಲ್ಲಿ ಚಾಸಾ-1 ರವರು ಡಿಪೋ ಮ್ಯಾನೇಜರ್ ಆಗಿದ್ದರು. ಚಾಸಾ-2 ರಿಂದ 7,9 ಮತ್ತು 10 ರವರು ನಮ್ಮ ಇಲಾಖೆಯ ಸಿಬ್ಬಂದಿಗಳು. ಆರೋಪಿಯು 2018 ನೇ ಸಾಲಿನಲ್ಲಿ ಬಸ್ಸಿನ ಚಾಲಕನಾಗಿದ್ದನು. 2018 ನೇ ಸಾಲಿನಲ್ಲಿ ಡಿಪೋದಲ್ಲಿ ಚಾಸಾ-6 ಮತ್ತು ಆರೋಪಿಯ ಮಧ್ಯ ಜಗಳ ನಡೆಯುತ್ತಿದ್ದು, ನಾನು ದೂರದಿಂದ ನೋಡುತ್ತಿದ್ದೆ. ಯಾವ ವಿಚಾರಕ್ಕಾಗಿ ಗಲಾಟೆ ನಡೆದಿರುತ್ತದೆ ಎಂದು ನನಗೆ

ಗೊತ್ತಿರುವುದಿಲ್ಲ. ಯಾರು ಯಾರಿಗೆ ಅವಾಚ್ಯ ಶಬ್ದಗಳಿಂದ ಬೈದಿರುತ್ತಾರೆ ಎಂಬ ಮಾಹಿತಿ ಇರುವುದಿಲ್ಲ. ಈ ಕುರಿತು ಪೊಲೀಸರು ನನ್ನನ್ನು ವಿಚಾರಣೆ ಮಾಡಿರುವುದಿಲ್ಲ.

(ಈ ಹಂತದಲ್ಲಿ ಮಾನ್ಯ ಎ.ಪಿ.ಪಿ. ಇವರು ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿಯೆಂದು ಪರಿಗಣಿಸಿ, ಪಾಟಿ ಸವಾಲಿಗೆ ಅನುಮತಿ ಕೋರಿದ್ದು, ಅನುಮತಿಸಲಾಯಿತು.)

<u>ಪಾಟಿ ಸವಾಲುಃ</u> ಮಾನ್ಯ ಎ.ಪಿ.ಪಿ.ಯವರಿಂದ

2. ಆರೋಪಿಯು ತನಗೆ ಕರ್ತವ್ಯಕ್ಕೆ ತಡೆ ಆದೇಶ ಮಾಡಲು ಚಾಸಾ-1 ಮತ್ತು 6 ಹಾಗೂ 7 ರವರು ಕಾರಣ ಎಂದು ತಪ್ಪಾಗಿ ಅರ್ಥೈಸಿಕೊಂಡು ಅವರ ಮೇಲೆ ದ್ವೇಷದಿಂದ ಇದ್ದ ಎಂದರೆ ಸರಿಯಲ್ಲ. ದಿಃ12-08-2018 ರಂದು ಬೆಳಿಗ್ಗೆ 9.30 ಗಂಟೆಗೆ ಕೆ ಎಸ್ ಆರ್ ಟಿ ಸಿ ಡಿಪೋ ಘಟಕಕ್ಕೆ ಬಂದು ಚಾಸಾ-6 ರವರಿಗೆ ಬೋಳಿ ಮಗನೇ ಸೂಳೀ ಮಗನೆ ನಿನ್ನ ತಾಯಿನ ಹಡ ನನಗೆ ಸಸ್ಪೆಂಡ್ ಮಾಡುತ್ತೀಯಾ ನಿನಗೆ ಬಿಡುವುದಿಲ್ಲ ಎಂದು ಅವಾಚ್ಯ ಶಬ್ದಗಳಿಂದ ಬೆದರಿಕೆ ಹಾಕಿರುತ್ತಾರೆ ಎಂದರೆ ಸರಿಯಲ್ಲ. ಅದೇ ರೀತಿ ಅಲ್ಲಿಯೇ ಇದ್ದ ಚಾಸಾ-7 ರವರಿಗೂ ಸಹ ಅವಾಚ್ಯ ದಿಂದ ಬೈದು ಬಲಗಾಲು ಎತ್ತಿ ಒದೆಯಲು ಪ್ರಯತ್ನಿಸಿದಾಗ ಅವರು ತಪ್ಪಿಸಿಕೊಂಡಿರುತ್ತಾರೆ ಎಂದರೆ ಸರಿಯಲ್ಲ. ಹಾಗೆ ಚಾಸಾ-1 ರಾರಿಗೂ ಸಹ ದೂರವಾಣಿ ಕರೆ ಮಾಡಿ, ಅವಾಚ್ಯ ಶಬ್ದಗಳಿಂದ ಬೈದು ನೀವು ಹೆಂಗೆ ಅಂಕೋಲಾದಲ್ಲಿ ಬಾಳತಿಯಾ ನೋಡುಕೋತೀನಿ ಎಂದು ಬೆದರಿಕೆ ಹಾಕಿ ಕರ್ತವ್ಯಕ್ಕೆ ಅಡ್ಡಿ ಪಡಿಸಿರುತ್ತಾನೆ ಎಂದರೆ ಸರಿಯಲ್ಲ. ಈ ಕುರಿತು ಚಾಸಾ-1 ರವರು ಪೊಲೀಸರಿಗೆ ದೂರನ್ನು ನೀಡಿದ್ದು, ನಿಪಿ-12 ರಂತೆ ಹೇಳಿಕೆಯನ್ನು ನೀಡಿರುತ್ತೀರಿ ಎಂದರೆ ಸರಿಯಲ್ಲ.

ಆರೋಪಿಗೆ ಸಹಾಯ ಮಾಡಲೆಂದು  ನೀವು ಸುಳ್ಳು ಸಾಕ್ಷಿ ಹೇಳುತ್ತಿದ್ದೀರಿ ಎಂದರೆ ಸರಿಯಲ್ಲ.

ಪಾಟೀ ಸವಾಲುಃ  ಆರೋಪಿ ಪರ ವಕೀಲರಾದ ಶ್ರೀ ಎನ್.ಆರ್. ಎನ್  ಇವರಿಂದಃ

3. ನಿಮ್ಮ ಇಲಾಖೆಯಲ್ಲಿ ಸಾಕಷ್ಟು ಸಿಬ್ಬಂದಿಗಳು ಇರುತ್ತಾರೆ ಎಂದರೆ ಸರಿ.  ನೀವು ಹೇಳಿದಂತೆ ಯಾವುದೇ ಜಗಳವಾಗಿರುವುದಿಲ್ಲ ಎಂದರೆ ಸರಿಯಲ್ಲ.   ಚಾಸಾ–1,6 ಮತ್ತು 7 ರವರು ನಿಮ್ಮ ಮೇಲಾಧಿಕಾರಿಗಳಾಗಿದ್ದು, ಅವರು ಹೇಳಿದಂತೆ ಕೇಳಬೇಕಾಗುತ್ತದೆ ಎಂದರೆ ಸಾಕ್ಷಿಯು  ಕಚೇರಿಯಲ್ಲಿ ಕೇಳಬೇಕಾಗುತ್ತದೆ ಎಂದು ನುಡಿಯುತ್ತಾರೆ.  ಅವರು ಹೀಗೇ ಹೇಳಿ ಎಂದು ಹೇಳಿದ್ದನ್ನು ನೀವು ಹೇಳಬೇಕಾಗುತ್ತದೆ ಎಂದರೆ ಸಾಕ್ಷಿಯು ಸಿಬ್ಬಂದಿಯಾಗಿದ್ದರಿಂದ ಹೇಳಬೇಕಾಗುತ್ತದೆ ಎಂದು ನುಡಿಯುತ್ತಾರೆ.  ನೀವು ಹೇಳಿದ ಪ್ರಕಾರ ದೂರದಿಂದ ಜಗಳ ಆಗುತ್ತಿದ್ದಿದ್ದನ್ನು ನೋಡಿರುತ್ತೇನೆ ಎಂದು ಹೇಳಿದ್ದು, ಆ ರೀತಿ ಯಾವುದೇ ಘಟನೆಯಾಗಿರುವುದಿಲ್ಲ ಎಂದು ಆರೋಪಿ ಹೇಳಿರುತ್ತಾರೆ ಎಂದರೆ ಸರಿಯಲ್ಲ. ಯಾವ ಕಾರಣಕ್ಕಾಗಿ ಹಾಗೂ  ಯಾರ ಯಾರ ಮಧ್ಯ  ನೀವು ಹೇಳುವಂತಹ ಘಟನೆ ಗೊತ್ತಿರುವುದಿಲ್ಲ ಎಂದರೆ ಸರಿ.

ಮರುವಿಚಾರಣೆ: ಇರುವುದಿಲ್ಲ.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಮಾಡಲಾಗಿದೆ).

ಓ ಹೇ ಕೇ ಸರಿ ಇದೆ

C/c. ಜೆ.ಎಂ.ಎಫ್.ಸಿ., ಅಂಕೋಲಾ.